**2042/0324/0102**

**I Semester 3 Year LL.B./III Semester 5 Year B.A. LL.B./B.B.A. LL.B. / V Semester 5 Year B.A. LL.B. (Maj.-Min. System)/B.B.A. LL.B. Examination, June/July 2018**
**(Old/New Batch)**
# CONSTITUTIONAL LAW

Duration : 3 Hours Max. Marks : 100

**Instructions** : 1. Answer Q. No. **4** and **5** and **any two** of the remaining questions in Part – 1.
ಭಾಗ – 1 ರಲ್ಲಿ ಪ್ರ. ಸಂಖ್ಯೆ **4** ಮತ್ತು **5** ಹಾಗೂ ಉಳಿದ ಪ್ರಶ್ನೆಗಳಲ್ಲಿ **ಎರಡನ್ನು** ಉತ್ತರಿಸಿರಿ.

2. Answer Q. No. **9** and **10** and **any two** of the remaining questions in Part – 2.
ಭಾಗ – 2 ರಲ್ಲಿ ಪ್ರ. ಸಂಖ್ಯೆ **9** ಮತ್ತು **10** ಹಾಗೂ ಉಳಿದ ಪ್ರಶ್ನೆಗಳಲ್ಲಿ **ಎರಡನ್ನು** ಉತ್ತರಿಸಿರಿ.

3. Marks are indicated against **each** question.
**ಪ್ರತೀ** ಪ್ರಶ್ನೆಗೂ ಎದುರಿಗೆ ಅಂಕಗಳನ್ನು ನಮೂದಿಸಲಾಗಿದೆ.

## PART – 1
## ಭಾಗ - 1

Q. No. 1. Explain the freedom of speech and expression under Constitution of India. Marks : 16
ಭಾರತದ ಸಂವಿಧಾನದಲ್ಲಿರುವ ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಬಗ್ಗೆ ವಿವರಿಸಿ.

Q. No. 2. The right to life and liberty of a person can be restrained only according to procedure established by law. Explain with decided cases. Marks : 16
ವ್ಯಕ್ತಿಯ ಜೀವ ಮತ್ತು ಸ್ವಾತಂತ್ರ್ಯವನ್ನು ಕಾನೂನಿನ ಪ್ರಕಾರವೇ ಮಾತ್ರ ಹರಣ ಮಾಡಬಹುದು. ನಿರ್ಧರಿತ ಪ್ರಕರಣಗಳೊಂದಿಗೆ ವಿವರಿಸಿ.

Q. No. 3. Explain the concept of the Directive Principles of State Policy and its salient features. Marks : 16
ರಾಜ್ಯದ ನೀತಿ ನಿರ್ದೇಶನಾತ್ಮಕ ತತ್ವಗಳ ಪರಿಕಲ್ಪನೆಯನ್ನು ಮತ್ತು ಅದರ ಮುಖ್ಯ ಲಕ್ಷಣಗಳನ್ನು ವಿವರಿಸಿರಿ.

Q. No. 4. Write short note on **any one** : Marks : 8×1=8

ಯಾವುದಾದರೂ **ಒಂದನ್ನು** ಕುರಿತು ಲಘು ಟಿಪ್ಪಣಿ ಬರೆಯಿರಿ :

a) Double Jeopardy.

ದ್ವಿದಂಡನೆ.

b) Fundamental Duties.

ಮೂಲಭೂತ ಕರ್ತವ್ಯಗಳು.

Q. No. 5. Answer **any one** of the following with reasons : Marks : 10×1=10

ಕೆಳಗಿನವುಗಳಲ್ಲಿ ಯಾವುದಾದರೂ **ಒಂದನ್ನು** ಕಾರಣ ಸಹಿತ ಉತ್ತರಿಸಿ.

a) Vijay Industries Ltd. was a manufacturer of garments at Nagpur for exports. Due to labour problem the factory suffered huge losses and found it difficult to continue their business. Hence decided to retrench 30% of the workforce to avert the losses. The retrenched employees petitioned to the government for suitable action. The government ordered the employer to reinstate them or face the take over by the government. Vijay Industries Ltd. challenged the government order. Decide.

ವಿಜಯ್ ಇಂಡಸ್ಟ್ರೀಯು ನಾಗ್ಪುರದಲ್ಲಿ ರಫ್ತಿಗಾಗಿ ಉಡುಪುಗಳ ಉತ್ಪಾದನಾ ಸಂಸ್ಥೆಯಾಗಿತ್ತು. ಈ ಉದ್ಯಮೆಯು ಕಾರ್ಮಿಕರ ತೊಂದರೆಯಿಂದಾಗಿ ತೀವ್ರ ನಷ್ಟವನ್ನು ಅನುಭವಿಸುತ್ತಿತ್ತು ಮತ್ತು ವ್ಯಾಪಾರ ವಹಿವಾಟು ನಡೆಸಲು ಅತೀ ಕಷ್ಟವಾಗುತ್ತಿತ್ತು. ಇದರಿಂದಾಗಿ ಉದ್ದಿಮೆಯ ಆಡಳಿತ ಮಂಡಳಿಯು 30% ಕಾರ್ಮಿಕರನ್ನು ನಷ್ಟವನ್ನು ಕಡಿಮೆ ಮಾಡುವ ಅಥವಾ ಪಾರಾಗುವ ಉದ್ದೇಶದಿಂದ ಸೇವೆಯಿಂದ ವಜಾ ಮಾಡಿತು. ವಜಾಗೊಂಡ ಕಾರ್ಮಿಕರು ಸೂಕ್ತ ಕ್ರಮಕ್ಕಾಗಿ ಸರಕಾರಕ್ಕೆ ದೂರು ನೀಡುತ್ತಾರೆ. ಸರಕಾರವು ಆಡಳಿತ ಮಂಡಳಿಗೆ ವಜಾಗೊಳಿಸಲ್ಪಟ್ಟ ಕಾರ್ಮಿಕರನ್ನು ಸೇವೆಗೆ ಮರು ನೇಮಕ ಮಾಡುವಂತೆ ಆದೇಶಿಸಿತು ಮತ್ತು ತಪ್ಪಿದಲ್ಲಿ ಸರಕಾರವು ಈ ಉದ್ಯಮೆಯನ್ನು ತನ್ನ ಹಿಡಿತಕ್ಕೆ ತೆಗೆದುಕೊಳ್ಳುವ ಸೂಚನೆಯನ್ನು ನೀಡಿತ್ತು. ವಿಜಯ್ ಇಂಡಸ್ಟ್ರಿಯು ಸರಕಾರದ ಈ ಕ್ರಮವನ್ನು ಪ್ರಶ್ನಿಸುತ್ತಾರೆ. ನಿರ್ಧರಿಸಿ.

b) A provision of the Gurunanak University Act directed the state to make provision for the study and research on the life and teaching of Saint Gurunanak in all state run and aided educational institutions. The management of one aided institution challenged the provision as unconstitutional. Decide.

ಗುರುನಾನಕ್ ವಿಶ್ವವಿದ್ಯಾಲಯ ಕಾಯ್ದೆಯ ಒಂದು ಉಪಬಂಧವು ರಾಜ್ಯ ಸರಕಾರಿ ವಿದ್ಯಾಕೇಂದ್ರಗಳು ಮತ್ತು ಅನುದಾನಿತ ವಿದ್ಯಾಸಂಸ್ಥೆಗಳಲ್ಲಿ ಸಂತ ಗುರುನಾನಕರ ಜೀವನ ಮತ್ತು ಬೋಧನೆಗಳು ಎಂಬ ವಿಷಯದಲ್ಲಿ ಅಧ್ಯಯನ ಮತ್ತು ಸಂಶೋಧನೆಯನ್ನು ನಡೆಸುವಂತೆ ಸರಕಾರಕ್ಕೆ ಒಂದು ನಿರ್ದೇಶನವನ್ನು ಹೊರಡಿಸಿತು. ಒಂದು ಅನುದಾನಿತ ವಿದ್ಯಾಸಂಸ್ಥೆಯ ಆಡಳಿತ ಮಂಡಳಿಯು ಕಾಯ್ದೆಯ ಈ ಉಪಬಂಧವನ್ನು ಅಸಂವಿಧಾನಾತ್ಮಕ ಎಂದು ಪ್ರಶ್ನಿಸುತ್ತಾರೆ. ನಿರ್ಧರಿಸಿ.

## PART – 2
## ಭಾಗ - 2

Q. No. 6. Explain the powers of President of India. State the procedure for impeachment of the President. Marks : 16
ಭಾರತದ ರಾಷ್ಟ್ರಪತಿಯವರ ಅಧಿಕಾರವನ್ನು ವಿವರಿಸಿ. ರಾಷ್ಟ್ರಪತಿಯವರನ್ನು ಮಹಾಭಿಯೋಗ ತೀರ್ಮಾನ ಮಾಡುವ ಪ್ರಕ್ರಿಯೆಯನ್ನು ತಿಳಿಸಿ.

Q. No. 7. Explain how a bill is introduced and passed as a statute in the Parliament. Marks : 16
ಪಾರ್ಲಿಮೆಂಟ್ (ಸಂಸತ್ತು)ನಲ್ಲಿ ಒಂದು ಮಸೂದೆಯು ಹೇಗೆ ಪರಿಚಯಿಸಲ್ಪಡುತ್ತದೆ ಮತ್ತು ಶಾಸನವಾಗಿ ಅಂಗೀಕಾರವಾಗುತ್ತದೆ ಎಂಬುದನ್ನು ವಿವರಿಸಿ.

Q. No. 8. 'The Indian Constitution is both rigid and flexible'. Explain this with reference to the Article 368 of the Constitution of India. Marks : 16
'ಭಾರತೀಯ ಸಂವಿಧಾನವು ಕಠಿಣವೂ ಮತ್ತು ಮೆದುವೂ ಆಗಿದೆ'. ಇದನ್ನು ಭಾರತದ ಸಂವಿಧಾನದ ಅನುಚ್ಛೇದ 368 ರ ಉಲ್ಲೇಖದಲ್ಲಿ ವಿವರಿಸಿ.

Q. No. 9. Write short note on **any one** : Marks : 8×1=8
ಯಾವುದಾದರೂ **ಒಂದರ** ಲಘು ಟಿಪ್ಪಣಿ ಬರೆಯಿರಿ :

a) State Emergency.
ರಾಜ್ಯ ತುರ್ತುಪರಿಸ್ಥಿತಿ.

b) Jurisdiction of High Court.
ಉಚ್ಚ ನ್ಯಾಯಾಲಯದ ಅಧಿಕಾರ ವ್ಯಾಪ್ತಿ.

Q. No. 10. Answer **any one** of the following with reasons : Marks : 10×1=10
ಕೆಳಗಿನವುಗಳಲ್ಲಿ ಯಾವುದಾದರೂ **ಒಂದನ್ನು** ಕಾರಣ ಸಹಿತ ಉತ್ತರಿಸಿ.

a) The Legislative Assembly of Karnataka decided to hold secret sessions on some issues of governance. Decide its validity.
ಕರ್ನಾಟಕ ಶಾಸನಸಭೆಯು ಆಡಳಿತದ ಕೆಲವು ಸಮಸ್ಯೆಗಳ ಬಗ್ಗೆ ಗೌಪ್ಯ ಅಧಿವೇಶನ ನಡೆಸುವಂತೆ ನಿರ್ಧರಿಸಿತು. ಇದರ ವಿಧಿಬದ್ಧತೆಯನ್ನು ನಿರ್ಧರಿಸಿ.

b) In view of increasing road accidents and resultant loss of life and property, the Supreme Court directed the Parliament to legislate for banning liquor sale and consumption and also prescribe driving speed limit with 80 kms/hr on all National and State Highways. The Parliament could not comply with the court direction. Decide.
ಹೆಚ್ಚುತ್ತಿರುವ ರಸ್ತೆ ಅಪಘಾತಗಳು ಮತ್ತು ಆದರಿಂದ ಸಂಭವಿಸುವ ಪ್ರಾಣ ಮತ್ತು ಆಸ್ತಿ ಹಾನಿಯನ್ನು ತಪ್ಪಿಸುವುದಕ್ಕಾಗಿ, ಸರ್ವೋಚ್ಚ ನ್ಯಾಯಾಲಯವು ಎಲ್ಲಾ ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳಲ್ಲಿ ಮದ್ಯಮಾರಾಟ ಮತ್ತು ಬಳಕೆಯ ನಿಷೇಧಕ್ಕಾಗಿ ಮತ್ತು ಚಾಲನೆಯ ವೇಗದ ಮಿತಿಯನ್ನು 80 kms/ಪ್ರತಿ ಗಂಟೆಗೆ ಎಂಬುದಕ್ಕಾಗಿ ಸೂಕ್ತ ಕಾನೂನು ಮಾಡುವಂತೆ ಸಂಸತ್ತಿಗೆ ನಿರ್ದೇಶನ ನೀಡಿತು. ಈ ನಿರ್ದೇಶನವನ್ನು ಸಂಸತ್ತಿಗೆ ಪಾಲಿಸಲಾಗದಾಯಿತು. ನಿರ್ಧರಿಸಿ.